**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.49/2024**

ಪ್ರಾ.ಸಾ. 3

ಚಾ.ಸಾ. 3

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 21.08.2025**

| | |
|---|---|
| ಸಾಕ್ಷಿದಾರರ ಹೆಸರು | ವಿನಯ್ ಕುಮಾರ್ |
| ತಂದೆಯ ಹೆಸರು | ಬೊಮ್ಮಲಿಂಗಯ್ಯ |
| ವಯಸ್ಸು | 30 ವರ್ಷ |
| ಉದ್ಯೋಗ | ಐಟಿ ಕಂಪನಿಯಲ್ಲಿ ಕೆಲಸ |
| ವಾಸ | ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಆರೋಪಿಗಳ ಪರಿಚಯ ಇದೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ 2 ರಿಂದ 5 ರವರನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ.1 ನನ್ನ ಚಿಕ್ಕಪ್ಪನ ಮಗ. ಚಾಸಾ.2 ನನ್ನ ಸಂಬಂಧಿಕ. ಚಾಸಾ.4 ರಿಂದ ಚಾಸಾ.7 ಕೂಡ ನಮ್ಮ ಗ್ರಾಮದವರು. 3 ವರ್ಷಗಳ ಹಿಂದೆ ಜಮೀನು ವಿಚಾರದಲ್ಲಿ ಆರೋಪಿಗಳಿಗೂ, ಚಾಸಾ.1 ಹಾಗೂ ಚಾಸಾ.2 ರವರಿಗೂ ಚಾಸಾ.1 ರವರ ಮನೆಯ ಬಳಿ ಗಲಾಟೆ ಆಗಿತ್ತು. ನಾನು ಗಾಲಟೆ ಬಿಡಿಸಲು ಹೋಗಿದೆ. ನನಗೆ ಏನು ತೊಂದರೆ ಆಗಿಲ್ಲ. ಚಾಸಾ.2, ನನಗೆ ಮತ್ತು ಚಾಸಾ.4 ರವರಿಗೆ ಆರೋಪಿಗಳು ಏನೂ ತೊಂದರೆ ಮಾಡಿಲ್ಲ. ನಮ್ಮೊಳಗೆ ಮಾತಿಗೆ ಮಾತು ಬೆಳೆದು ಜಗಳ ಆಗಿತ್ತು. ಊರಿನ ಹಿರಿಯರು ಬಂದು ಮಾತುಕತೆ ಆಡಿ ಜಗಳ ಬಿಡಿಸಿದರು ಮತ್ತು ಜಗಳ ಮಾಡಬೇಡಿ ಎಂದು ಹೇಳಿದರು. ಆರೋಪಿಗಳು ಆಯುಧಗಳಿಂದ ನನಗೆ ಮತ್ತು ಚಾಸಾ.2, ಚಾಸಾ.4 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿಲ್ಲ. ಆ ದಿನ ಅವರು ಚಾಸಾ.1 ರವರ

ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ಅವ್ಯಾಚ ಪದಗಳಿಂದ ಬೈದು, ಕೈಗಳಿಂದ ಹೊಡೆದು ಹಲ್ಲೆ ಮಾಡಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ.1 ಡ್ರ್ಯಾಗರ್ ನಾನು ನೋಡಿಲ್ಲ, ಇದೇ ದಿನ ಮೊದಲನೇ ಬಾರಿ ನೋಡುತ್ತಿದ್ದೇನೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ. ಆರೋಪಿಗಳ ವಿರುದ್ಧ ಯಾರು ದೂರು ನೀಡಿದ್ದು, ಅವರು ಏನು ತಪ್ಪು ಮಾಡಿದ್ದಾರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

*2.* ದಿನಾಂಕ *10.03.2023* ರಂದು ರಾತ್ರಿ ಸುಮಾರು *10.00* ಗಂಟೆಗೆ ಚಾಸಾ.*1* ಮತ್ತು ಚಾಸಾ.*2* ತುಮಕೂರು–ಮದ್ದೂರು ರಸ್ತೆಯ ಪಕ್ಕದಲ್ಲಿರುವ ಟೀ ಅಂಗಡಿ ಬಳಿ ಇದ್ದಾಗ ಅಲ್ಲಿಗೆ *2* ಮತ್ತು *5* ನೇ ಆರೋಪಿಗಳು ಹಾಗೂ ಭರತ್ ಎಂಬುವವರು ಬಂದು ಚಾಸಾ.*2* ರವರಿಗೆ ಏಕಾಏಕಿ ಏನೋ ಗುರಾಯಿಸುತ್ತಿದ್ದೀಯಾ ಎಂದು ಕೇಳಿದಾಗ ಚಾಸಾ.*2* ಗುರಾಯಿಸಿಲ್ಲ ಎಂದು ಹೇಳಿದ್ದಕ್ಕೆ ಅವರುಗಳು ಚಾಸಾ.*1* ಹಾಗೂ ಚಾಸಾ.*2* ಮೇಲೆ ಗಲಾಟೆ ಮಾಡಿ ನಿಮ್ಮನ್ನು ಮುಂದೆ ನೋಡಿಕೊಳ್ಳುತ್ತೇವೆಂದು ಹೇಳಿ ಹೊರಟು ಹೋದರು ಎಂದರೆ ನನಗೆ ಗೊತ್ತಿಲ್ಲ.

*3.* ದಿನಾಂಕ *11.03.2023* ರಂದು ಬೆಳಗ್ಗೆ *11.00* ಗಂಟೆಗೆ ಚಾಸಾ.*1* ಮತ್ತು ಚಾಸಾ.*2* ರವರು ಚಾಸಾ.*1* ರವರ ಮನೆಯಲ್ಲಿದ್ದಾಗ ಎಲ್ಲಾ *5* ಜನ ಆರೋಪಿಗಳು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಚಾಸಾ.*1* ರವರ ಮನೆಯ ಬಳಿ ಬಂದು ಚಾಸಾ.*1* ಹಾಗೂ ಚಾಸಾ.*2* ರವರನ್ನು ಕುರಿತು ಗಾಂಡು ನನ್ನ ಮಕ್ಕಳಾ ಈಚೆ ಬನ್ನಿ ಇವತ್ತು ನಿಮಗೊಂದು ಗತಿ ಕಾಣಿಸುತ್ತೀವಿ ಎಂದು ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ಆಗ ಅವರು ಹೆದರಿಕೊಂಡು ಮನೆಯ ಒಳಗೆ ಇದ್ದರು, ಆಗ ಆರೋಪಿಗಳು ಅವರ ಮನೆಯ ಒಳಗೆ ನುಗ್ಗಿ ಚಾಸಾ.*1* ಮತ್ತು ಚಾಸಾ.*2* ರವರನ್ನು ಮನೆಯ ಹೊರಗೆ ಎಳೆದು ರಸ್ತೆಗೆ ತಂದು ಎಲ್ಲಾ ಆರೋಪಿಗಳು ಮತ್ತು ಭರತ್ ಎಲ್ಲರೂ ಸೇರಿ ಕೈಗಳಿಂದ ಚಾಸಾ.*1* ಹಾಗೂ ಚಾಸಾ.*2* ರವರ ಮೇಲೆ ಹೊಡೆದರು ಮತ್ತು ನೋವುಂಟು

ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ನಿಖಿಲ್ ತನ್ನ ಪ್ಯಾಂಟಿನ ಜೇಬಿನಲ್ಲಿದ್ದ ಡ್ರ್ಯಾಗರನ್ನು ತೆಗೆದು ಚಾಸಾ.2 ರವರ ಎದೆಗೆ ಚುಚ್ಚಲು ಬಂದ ಆಗ ಚಾಸಾ.2 ತಪ್ಪಿಸಿಕೊಳ್ಳಲು ಬಲಕ್ಕೆ ತಿರುಗಿದಾಗ ಡ್ರ್ಯಾಗರ್ ಚಾಸಾ.2ರವರ ಎಡಗೈ ತೋಳಿಗೆ ತಾಗಿ, ರಕ್ತಗಾಯವಾಯಿತು ಎಂದರೆ ನನಗೆ ಗೊತ್ತಿಲ್ಲ. ಆಗ ಸತೀಶ್ ಮತ್ತು ನಾನು ಜಗಳ ಬಿಡಿಸಲು ಹೋದೆವು ಎಂದರೆ ಸಾಕ್ಷಿ ಡ್ರ್ಯಾಗರ್ ನಿಂದ ಹಲ್ಲೆ ಮಾಡಿದ್ದನ್ನು ನಾನು ನೋಡಿಲ್ಲ ತಳ್ಳಾಡುವಾಗ ಹೋಗಿ ಬಿಡಿಸಿದ್ದೇನೆ, ಆಗ ನಿಖಿಲ್ ಡ್ರ್ಯಾಗರ್ ನಿಂದ ಸತೀಶನ ಬಲಗೈ ಮುಂಗೈಗೆ ಹೊಡೆದ, ಅದೇ ರೀತಿ ನಿಖಿಲ್ ಡ್ರ್ಯಾಗರ್ ನಿಂದ ನನ್ನ ಎಡಹೊಟ್ಟೆಗೆ ಹೊಡೆದ ಮತ್ತು ಗಾಯ ಮಾಡಿದ ಎಂದರೆ ಸರಿಯಲ್ಲ. ಆಗ ಚಾಸಾ.5 ರಿಂದ ಚಾಸಾ.7 ರವರು ಜಗಳ ಬಿಡಿಸಲು ಬಂದಾಗ ಆರೋಪಿಗಳು ಈ ದಿನ ಜನರು ಬಂದರು ಎಂದು ಬಜಾವ್ ಆಗಿದ್ದೀರಿ ಮುಂದೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಅಂತ ಹೇಳಿ ಕೊಲೆ ಬೆದರಿಕೆ ಹಾಕಿ ಹೋದರು ಎಂದರೆ ಸರಿಯಲ್ಲ.

4. ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 1ನೇ ಆರೋಪಿ ಚಾಸಾ.2 ಮತ್ತು ನನಗೆ ಹಾಗೂ ಚಾಸಾ.4 ರವರಿಗೆ ಹಲ್ಲೆ ಮಾಡಿದ್ದರೂ ಮಾಡಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರಿಯಾಗಿ ಸಾಕ್ಷಿ ನುಡಿದರೆ ಆರೋಪಿಗಳಿಗೆ ಶಿಕ್ಷೆ ಆಗುತ್ತದೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ದಿನಾಂಕ 11.03.2023 ರಂದು ಹೇಳಿಕೆ ನೀಡಿ ಆರೋಪಿಗಳು ನಮಗೆ ಹಲ್ಲೆ ಮಾಡಿದ ಬಗ್ಗೆ ಹೇಳಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ದಿನಾಂಕ 11.03.2023 ರ ಎಲ್ಲಾ ಅಂಶಗಳನ್ನು ನಿರಾಕರಿಸಿದ ಕಾರಣ ಸದರಿ ಹೇಳಿಕೆಯನ್ನು ನಿಪಿ.5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಆರೋಪಿತರ ಪರ ವಕೀಲರು ಗೈರು ಹಾಜರಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.